
# 'ತತ್ತ್ವಮಸಿ, ಶ್ವೇತಕೇತೋ'

## (ಛಾಂದೋಗ್ಯೋಪನಿಷತ್ತು)

ಸ್ವಾಮಿ ವೀರೇಶಾನಂದ



ಮೊದಲನೆಯ ಭಾಗ

ಛಾಂದೋಗ್ಯ ಉಪನಿಷತ್ತಿನ ಆರನೆಯ ಅಧ್ಯಾಯವು ಆರಂಭವಾಗುವುದು ಹೀಗೆ: ಶ್ವೇತಕೇತು ಎನ್ನುವ ಹುಡುಗನಿದ್ದನು. ಅವನು ಅರುಣನ ಮೊಮ್ಮಗನು. ಅವನ ತಂದೆಯು ಆರುಣಿಯು. ಹೀಗಾಗಿ ಶ್ವೇತಕೇತುವು ಆರುಣೇಯನು. ಅವನಿಗೆ ಉಪನಯನದ ಕಾಲವು ಮೀರುತ್ತಿತ್ತು. ಉಪಯನವೆಂದರೆ ವಿದ್ಯಾಭ್ಯಾಸವನ್ನು ಮಾಡಿಸುವ ಕರ್ಮ. ಅದನ್ನು ಮಾಡಿಸಿಕೊಂಡ ಮೇಲೆ ಗುರುಗಳ ಮನೆಗೆ ಹೋಗಬೇಕು; ವಿದ್ಯೆಯನ್ನು ಕಲಿಯಬೇಕು. ಪ್ರಾಪ್ತವಯಸ್ಕನಾಗಿದ್ದರೂ ಕೂಡ, ಶ್ವೇತಕೇತುವು ವಿದ್ಯಾಭ್ಯಾಸದಲ್ಲಿ ಆಸಕ್ತಿಯನ್ನು ತೋರಿಸಿರಲಿಲ್ಲ.

ಇದನ್ನು ನೋಡಿ ಬೇಸರಗೊಂಡ ಅವನ ತಂದೆಯು ಹೀಗೆ ಹೇಳಿದನು: ''ಎಲೈ ಶ್ವೇತಕೇತುವೇ, ನಮ್ಮ ಕುಲಕ್ಕೆ ತಕ್ಕವನಾದ ಗುರುವಿನ ಬಳಿಗೆ ನೀನು ಹೋಗಬೇಕು. ಅವನ ಬಳಿ ಇದ್ದುಕೊಂಡು ಬ್ರಹ್ಮಚರ್ಯವನ್ನು ಪರಿಪಾಲಿಸುತ್ತ ವಾಸಮಾಡಿಕೊಂಡಿರು. ಅಧ್ಯಯನವನ್ನು ಮಾಡದೆ ಕೇವಲ ಬ್ರಾಹ್ಮಣರ ಬಂಧುವಾಗಿ ಇರುವವನನ್ನು 'ಬ್ರಹ್ಮಬಂಧು' ಎಂದು ಕರೆಯುತ್ತಾರೆ. ನಮ್ಮ ಕುಲದಲ್ಲಿ ಹುಟ್ಟಿದವನು ಅಧ್ಯಯನ ಮಾಡದೆ ಬ್ರಹ್ಮಬಂಧುವಿನಂತೆ ಇರುವುದು ಸರಿಯಲ್ಲ. ಮಗೂ, ನಾನು ಬಹಳ ದೂರದ ದೇಶಕ್ಕೆ ಹೋಗಬೇಕಾಗಿದೆ. ನಿನಗೆ ಉಪನಯನ ಮಾಡಿಸಿ, ವಿದ್ಯಾಭ್ಯಾಸ ಮಾಡಿಸುವುದಕ್ಕೆ ನನಗೆ ಆಗುವುದಿಲ್ಲ. ನೀನು ನಮ್ಮ ಕುಲದ ಗುರುಗಳ ಮನೆಗೆ ಹೋಗು. ಅವರಿಂದ ಉಪನಯನ ಮಾಡಿಸಿಕೊಂಡು, ವಿದ್ಯಾಭ್ಯಾಸವನ್ನು ಮಾಡು.''

ಶ್ವೇತಕೇತುವು ಆಗ ಹನ್ನೆರಡು ವರ್ಷದವನಾಗಿದ್ದನು. ಅವನು ಹನ್ನೆರಡು ವರ್ಷಗಳವರೆಗೆ ಗುರುಕುಲದಲ್ಲಿ ವಿದ್ಯಾಭ್ಯಾಸವನ್ನು ಮಾಡಿದನು. ಇಪ್ಪತ್ತುನಾಲ್ಕು ವರ್ಷದವನಾಗಿರುವಾಗ ಅವನು ಗುರುಕುಲದಿಂದ ಹೊರಕ್ಕೆ ಬಂದನು. ಆ ಕಾಲದಲ್ಲಿ ಅವನು ಸರ್ವವೇದಗಳನ್ನೂ ಅಧ್ಯಯನ ಮಾಡಿದ್ದನು. ಅವನು ಮನೆಗೆ ಬರುವಾಗ, ತಾನು ಮಿಕ್ಕವರಿಗೆ ಸಮಾನನಲ್ಲ, ನಾನು ಎಲ್ಲರಿಗಿಂತ ಹೆಚ್ಚಿನವನು ಎಂಬ ಅಹಂಕಾರವನ್ನು ಹೊಂದಿದ್ದನು. ಯಾರಿಗೂ ತಲೆಬಾಗದೆ ಇರುವ ದುರಭಿಮಾನಿಯಾಗಿದ್ದನು.

ಯುವಕನಾಗಿರುವ ಶ್ವೇತಕೇತುವಿಗೆ ಈ ಬಗೆಯ ದುರಹಂಕಾರ ಸ್ವಭಾವವು ತಕ್ಕುದಲ್ಲ ಎಂದು ತಂದೆಯು ಅಂದುಕೊಂಡನು. ಮಗನನ್ನು ಸದ್ಧರ್ಮ ಮಾರ್ಗಕ್ಕೆ ತರಬೇಕು ಎಂದು ಇಚ್ಛಿಸಿದನು. ತನ್ನ ಮಗನನ್ನು ಕುರಿತು ಹೀಗೆ ಹೇಳಿದನು:

''ಶ್ವೇತಕೇತು, ಹೇ ಸೋಮ್ಯ, ನೀನು ದುರಹಂಕಾರಿಯಾಗಿದ್ದೀಯೆ. ನಿನಗಿಂತ ಹೆಚ್ಚಿನವರು ಇಲ್ಲ ಎಂಬ ಅಭಿಮಾನವನ್ನು ಹೊಂದಿದ್ದೀಯೆ. ಇದು ಸರಿಯೆ? ಇಂಥ ಅಭಿಮಾನಕ್ಕೆ ಕಾರಣವಾಗುವಂಥ ಅದ್ಯಾವ ವಿಶೇಷ ಉಪದೇಶವನ್ನು ನೀನು ನಿನ್ನ ಆಚಾರ್ಯರಿಂದ ಪಡೆದುಕೊಂಡಿದ್ದೀಯೆ? ನೋಡು, ಯಾವ ಉಪದೇಶವನ್ನು ಕೇಳಿಕೊಂಡಾಗ, ಯಾವುದು ಕೇಳುವುದಕ್ಕೆ ಆಗುವುದಿಲ್ಲವೋ (ಅಶ್ರುತ) ಅದು ಕೇಳುವುದಕ್ಕೆ ಆಗುವುದೋ (ಶ್ರುತ), ಯಾವುದನ್ನು ಆಲೋಚನೆ ಮಾಡುವುದಕ್ಕೆ ಆಗುವುದಿಲ್ಲವೋ (ಅಮತ), ಅದು ಯೋಚನೆ ಮಾಡುವಂತೆ ಆಗುವುದೋ (ಮತ), ಯಾವುದು ತಿಳಿದುಕೊಳ್ಳುವುದಕ್ಕೆ ಆಗುವುದಿಲ್ಲವೋ (ಅವಿಜ್ಞಾತ), ಅದು ತಿಳಿದುಕೊಳ್ಳುವಂತೆ ಆಗುವುದೋ (ವಿಜ್ಞಾತ), ಯಾವುದು ಅನಿಶ್ಚಿತವಾಗಿದ್ದು ನಿಶ್ಚಿತವಾಗುವುದೋ — ಅಂಥ ಉಪದೇಶವನ್ನು ನೀನು ನಿನ್ನ ಗುರುಗಳಿಂದ ಕೇಳಿ ತಿಳಿದಿರುವಿಯೇನು? ಅಂಥ ಉಪದೇಶದಿಂದ ಒಂದನ್ನು ಅರಿತುಕೊಂಡರೆ ಎಲ್ಲವನ್ನೂ ಅರಿತುಕೊಳ್ಳಲು ಸಾಧ್ಯ, ಗೊತ್ತೇನು?''

ಶ್ವೇತಕೇತುವು ತಬ್ಬಿಬ್ಬಾದನು. ಒಂದನ್ನು ಅರಿತುಕೊಂಡರೆ, ಎಲ್ಲವನ್ನೂ ಅರಿತುಕೊಂಡಂತೆ ಆಗಲು ಹೇಗೆ ಆಗಲು ಸಾಧ್ಯ? ಎಂದು ಅವನು ಆಶ್ಚರ್ಯಗೊಂಡನು. ತನ್ನ ತಂದೆಯನ್ನೇ ಗುರುವಾಗಿ ಸ್ವೀಕರಿಸಿದನು. ''ಎಲೈ ಭಗವಂತನೇ, ಈ ಉಪದೇಶವು ಯಾವ ಪ್ರಕಾರವಾಗಿ ಇರುತ್ತದೆ?'' ಎಂದು ಅವನು ಪ್ರಶ್ನಿಸಿದನು.

ಈಗ ತಂದೆಯು ಒಂದರ ಜ್ಞಾನವು ಎಲ್ಲದರ ಜ್ಞಾನವಾಗಲು ಸಾಧ್ಯ ಎಂದು ತೋರಿಸಿಕೊಡುವುದಕ್ಕೆ ಹಲವಾರು ಉದಾಹರಣೆಗಳನ್ನು ನೀಡುತ್ತಾನೆ:

''ಮಗೂ, ಆ ಉಪದೇಶವು ಹೇಗೆ ಇರುತ್ತದೆ ಎನ್ನುವುದನ್ನು ಹಲವಾರು ಉದಾಹರಣೆಗಳ ಮೂಲಕ ನಾನು ನಿನಗೆ ಹೇಳಿಕೊಡುತ್ತೇನೆ, ಕೇಳು. ನೋಡು, ಲೋಕದಲ್ಲಿ ಹಲವಾರು ಮಡಕೆಗಳನ್ನು ಮಾಡುವ ಒಂದು ಮಣ್ಣುಮುದ್ದೆ ಇದೆ ಎಂದು ತಿಳಿದುಕೋ. ಅದನ್ನು ತಿಳಿದುಕೊಂಡರೆ ಸಾಕು ತಾನೇ, ಅದರಿಂದ ಆ ಮಣ್ಣುಮುದ್ದೆಯಿಂದ ಮಾಡಲ್ಪಡುವ ಎಲ್ಲ ಮಡಕೆಗಳನ್ನೂ ತಿಳಿದುಕೊಂಡಂತೆ ಆಗಿಬಿಡುತ್ತದೆ, ಅಲ್ಲವೆ?

''ಮಗೂ ಇದರ ರಹಸ್ಯವನ್ನು ಹೇಳುತ್ತೇನೆ, ಕೇಳು. ಇಲ್ಲಿ ಮಣ್ಣುಮುದ್ದೆಯೊಂದೇ ಸತ್ಯವಾದುದು. ಮಡಕೆ ಎಂದು ಹೇಳುವುದು ಬರಿ ಹೆಸರು ಮಾತ್ರ. ಮಣ್ಣುಮುದ್ದೆಯ ಒಂದು ರೀತಿಯ ವಿಕಾರವನ್ನೇ ನಾವು 'ಮಡಕೆ' ಎಂದು ಹೇಳುತ್ತೇವೆ, ಅಷ್ಟೇ. ಮಡಕೆ ಎನ್ನುವುದು ಮಣ್ಣುಮುದ್ದೆಗೆ ನೀಡಬಹುದಾದ ಇನ್ನೊಂದು ಹೆಸರು ಮಾತ್ರ. ತಿಳಿಯಿತೆ?

''ಇದನ್ನು ಅರ್ಥಮಾಡಿಸಲು ಇನ್ನೂ ಎರಡು ಉದಾಹರಣೆಗಳನ್ನು ನೀಡುತ್ತೇನೆ. ಒಂದು ಚಿನ್ನದ ಗಟ್ಟಿಯಿಂದ ಚಿನ್ನದ ಕಡಗ, ಕಿರೀಟ, ತೋಳಬಂದಿ — ಮುಂತಾದ ಆಭರಣಗಳನ್ನು ತಯಾರಿಸಬಹುದು. ಇವೆಲ್ಲವೂ ಚಿನ್ನದ ಗಟ್ಟಿಯ ವಿಕಾರಗಳು. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ಅವೆಲ್ಲವೂ ಒಂದೇ ಚಿನ್ನದ ಗಟ್ಟಿಯ ಬೇರೆ ಬೇರೆ ಹೆಸರುಗಳು ಮಾತ್ರವೇ.

''ಅದೇ ರೀತಿ, ಕಬ್ಬಿಣದಿಂದ ಮಾಡಿದ ಉಗುರುಗತ್ತಿಯನ್ನು ಚೆನ್ನಾಗಿ ತಿಳಿದುಕೊಂಡರೆ, ಕಬ್ಬಿಣದಿಂದ ಮಾಡಿರುವ ಎಲ್ಲ ಪದಾರ್ಥಗಳನ್ನೂ ಚೆನ್ನಾಗಿ ಅರಿಯಬಹುದು. ಏಕೆಂದರೆ, ಅವೆಲ್ಲವೂ ಕಬ್ಬಿಣಕ್ಕೆ ನೀಡಿರುವ ವಿವಿಧ ಹೆಸರುಗಳು ಮಾತ್ರ. ಏಕೆಂದರೆ, ಅವೆಲ್ಲವೂ ಕಬ್ಬಿಣದ ಬಗೆಬಗೆಯ ವಿಕಾರಗಳು.''

ಆಗ ಶ್ವೇತಕೇತುವು ತನ್ನ ತಂದೆಯನ್ನು ಕೇಳಿಕೊಂಡನು. ''ಅಪ್ಪಾ, ಪೂಜ್ಯರಾದ ನನ್ನ ಗುರುಗಳು ಕೂಡ ಈ ಉಪದೇಶವನ್ನು ಅರಿತುಕೊಂಡಿಲ್ಲ ಎಂದು ಕಾಣುತ್ತದೆ. ಅವರು ನಿಜವಾಗಲೂ ತಿಳಿದುಕೊಂಡಿದ್ದರೆ, ಸದ್ಗುಣಿಯೂ ಶ್ರದ್ಧಾವಂತನೂ ಆದ ನನಗೆ ಖಂಡಿತ ಹೇಳಿಕೊಡುತ್ತಿದ್ದರು. ಈಗ ನನಗೆ ಬೇರೆ ಗತಿಯಿಲ್ಲ. ತಂದೆಯಾದ ನೀವೇ ನನ್ನ ಗುರುಗಳಾಗಿರಿ. ಯಾವುದನ್ನು ತಿಳಿದುಕೊಂಡರೆ ಎಲ್ಲವನ್ನೂ ತಿಳಿದುಕೊಳ್ಳಬಹುದೋ, ಅಂಥ ಉಪದೇಶವನ್ನು ನನಗೆ ನೀವೇ ಹೇಳಿಕೊಡಬೇಕು.''

ಛಾಂದೋಗ್ಯ ಉಪನಿಷತ್ತಿಗೆ ಸೊಗಸಾದ ಭಾಷ್ಯವನ್ನು ಬರೆದಿರುವ ಶ್ರೀಶಂಕರಾಚಾರ್ಯರು ಶ್ವೇತಕೇತುವಿನ ಈ ವರ್ತನೆಗೆ ಎರಡು ಕಾರಣಗಳನ್ನು ನೀಡುತ್ತಾರೆ. ಗುರುವಿನ ದೋಷವನ್ನು ಶಿಷ್ಯನಾದವನು ಎತ್ತಿ ಹೇಳಬಾರದು. ಆದರೂ ಶ್ವೇತಕೇತುವು ತನ್ನ ದೌರ್ಬಲ್ಯವನ್ನು ಮುಚ್ಚಿಕೊಳ್ಳಲು, ಗುರುವನ್ನು ದೂಷಿಸುತ್ತಿದ್ದಾನೆ. ಇನ್ನೊಂದು ಕಾರಣ ಹಾಸ್ಯಮಯವಾಗಿದೆ. ಉಪದೇಶವನ್ನು ಪಡೆಯಲು ಮತ್ತೆ ಗುರುಕುಲಕ್ಕೆ ತಂದೆಯು ಕಳಿಸಿ ಬಿಡುವನೋ ಎಂದು ಶ್ವೇತಕೇತುವು ಭಯಗೊಂಡಿದ್ದನಂತೆ. ಹೌದು, ಇದೂ ಒಂದು ಕಾರಣವಿರಬಹುದು.

ಶ್ವೇತಕೇತುವಿನ ಪ್ರಾರ್ಥನೆಗೆ ಓಗೊಟ್ಟ ಅವನ ತಂದೆಯು ಉಪದೇಶವನ್ನು ಮಾಡಲು ಒಪ್ಪಿಕೊಂಡನು. ಉಪದೇಶವು ಹೀಗೆ ಆರಂಭವಾಯಿತು.

''**ಸದೇವ ಸೋಮ್ಯ, ಇದಮಗ್ರ ಆಸೀತ್, ಏಕಮೇವ ಅದ್ವಿತೀಯಮ್** – ಸೋಮ್ಯ, ಎರಡನೆಯದಿಲ್ಲದ್ದೂ, ಒಂದೇ ಆಗಿರುವುದೂ ಆದ ಸತ್ ವಸ್ತುವೊಂದೇ ಈ ಸೃಷ್ಟಿಯ ಆದಿಯಲ್ಲಿ ಇತ್ತು. ಅದೇ ಸದ್ವಸ್ತುವು ಈಗಲೂ ಸೃಷ್ಟಿಯ ಆದ್ಯಂತವೂ ಓತಪ್ರೋತವಾಗಿದೆ. ಕೆಲವರು ಹೇಳುತ್ತಾರೆ, 'ಈ ಏಕಮೇವ ಅದ್ವಿತೀಯವಾದ ವಸ್ತುವು ಹಿಂದೆ ಅಸದ್ವಸ್ತುವಾಗಿತ್ತು. ಈ ಅಸದ್ವಸ್ತುವಿನಿಂದ ಸದ್ವಸ್ತುವಾದ ಈ ಜಗತ್ತು ಒಡಮೂಡಿ ಬಂದಿದೆ' ಎಂದು.''

ಶ್ವೇತಕೇತುವು ಈ ಉತ್ತರದಿಂದ ಬಹಳ ಅಚ್ಚರಿಗೊಂಡನು. ''ಭಗವಂತನೇ, ಇದು ಹೇಗೆ ಸಾಧ್ಯ? ಅಸತ್ತಿನಿಂದ ಸತ್ತು ಒಡಮೂಡುವುದಾದರೂ ಹೇಗೆ?'' ಅದಕ್ಕೆ ಅವನ ತಂದೆಯು

ಉತ್ತರವನ್ನು ನೀಡುತ್ತಾನೆ: ''ಮಗೂ, ಅದು ಸರ್ವಥಾ ಅಸತ್ತು ಎಂದು ಹೇಳಲಾಗುವುದಿಲ್ಲ. ಅದೂ ಸತ್ತೇ, ಅಂದರೆ ಇರುವಂಥ ವಸ್ತುವೇ. ಇರುವುದರಿಂದಲೇ ಇರುವಂಥದ್ದು ಬರಲು ಸಾಧ್ಯ, ಅಲ್ಲವೆ? ಸತ್ತಿನಿಂದಲೇ ಸತ್ತು ಬರಲು ಸಾಧ್ಯ. ಇಲ್ಲಿ ಅಸತ್ತು ಎಂದರೆ 'ಅವ್ಯಕ್ತ' ಎಂದರ್ಥ. ಸತ್ತು ಎಂದರೆ 'ವ್ಯಕ್ತ' ಎಂದರ್ಥ.

''ಈ ಆತ್ಮತತ್ತ್ವವು 'ಬಹುವಾಗುವೆನು, ಹುಟ್ಟುವೆನು' ಎಂದು ಯೋಚಿಸಿತು. ಹೀಗೆ ಯೋಚಿಸುತ್ತಲೇ ಅದು ತೇಜಸ್ಸನ್ನು ಸೃಜಿಸಿತು. ಆ ತೇಜಸ್ಸು ಕೂಡ 'ಬಹುವಾಗುವೆನು, ಹುಟ್ಟುವೆನು' ಎಂದು ಯೋಚಿಸಿ ನೋಡಿತು. ಹೀಗೆ ಅಪ್(ನೀರು) ಅನ್ನು ಸೃಷ್ಟಿಸಿತು. ಈ ಅಪ್ ಕೂಡ 'ಬಹುವಾಗುವೆನು, ಹುಟ್ಟುವೆನು' ಎಂದು ಆಲೋಚಿಸಿತು. ಆ ಮೂಲಕ ಅನ್ನವು ಸೃಷ್ಟಿಯಾಯಿತು. ಆದ್ದರಿಂದಲೇ, ಎಲ್ಲೆಲ್ಲಿ ಮಳೆಯಾಗುತ್ತದೆಯೋ, ಅಲ್ಲೆಲ್ಲ ಹೆಚ್ಚಿನ ಅನ್ನವಾಗುತ್ತದೆ. ಅನ್ನದಿಂದ ಜೀವಿಗಳು ಉಂಟಾಗುತ್ತವೆ.

''ಮೂರು ರೀತಿಯ ಜೀವಿಗಳು ಉಂಟಾಗುತ್ತವೆ. ಅವೆಂದರೆ ಅಂಡಜ, ಜೀವಜ ಮತ್ತು ಉದ್ಭಿಜ್ಜ. ಮೊಟ್ಟೆಯಿಂದ ಹುಟ್ಟುವ ಜೀವಿಗಳು ಅಂಡಜ ಜೀವಿಗಳು, ಪಕ್ಷಿಗಳೇ ಮುಂತಾದವು. ಇತರ ಜೀವಿಯಿಂದ ಹುಟ್ಟಿರುವುದು ಜೀವಜ, ಮನುಷ್ಯ, ಪ್ರಾಣಿಗಳು ಮುಂತಾದವು. ಉದ್ಭಿಜ್ಜ ಎಂದರೆ ಭೂಮಿಯಿಂದ ಒಡೆದು ಮೇಲಕ್ಕೆ ಬರುವಂಥ ಜೀವಿಗಳು, ಸಸ್ಯ ಮುಂತಾದವು.

''ಈ ಜೀವಿಗಳನ್ನು ಹುಟ್ಟಿಸಿದ ಮೇಲೆ ಆತ್ಮವು ಯೋಚಿಸಿತು. 'ಒಳ್ಳೆಯದು, ನಾನು ಈ ಮೂರು ರೀತಿಯ ಜೀವಿಗಳನ್ನು ಜೀವಾತ್ಮನ ರೂಪದಿಂದ ಪ್ರವೇಶಮಾಡುತ್ತೇನೆ. ಆ ಮೂಲಕ ನಾಮ ಮತ್ತು ರೂಪಗಳ ಮೂಲಕ ಬೇರೆ ಬೇರೆ ವಿಂಗಡನೆ ಮಾಡುವೆನು.' ಈ ಹೇಳಿಕೆಯು ತಾತ್ತ್ವಿಕವಾಗಿ ಬಹಳ ಮುಖ್ಯವಾದುದು. ಪರಮಾತ್ಮನು ಜೀವಾತ್ಮರೂಪದಿಂದ ಪ್ರತಿ ಜೀವಿಗಳ ದೇಹವನ್ನು ಪ್ರವೇಶಿಸುವನು ಎಂದು ಇಲ್ಲಿ ಹೇಳಿದೆ.''

ಜೀವನೆಂದರೆ ಯಾರು? ಆತ್ಮನ ಆಭಾಸ ಮಾತ್ರ. ದೇಹ, ಮನಸ್ಸು, ಬುದ್ಧಿಗಳ ಸಂಬಂಧದಿಂದ ಉಂಟಾಗಿರುವುದು ಅದು ಎಂದು ಶ್ರೀಶಂಕರಾಚಾರ್ಯರು ವಿವರಿಸುತ್ತಾರೆ. ಇದಕ್ಕೆ ಅವರು ಎರಡು ಉದಾಹರಣೆಗಳನ್ನು ನೀಡುತ್ತಾರೆ. ಕನ್ನಡಿಯೊಳಗೆ ಮನುಷ್ಯನ ಮುಖವು ಕಾಣುತ್ತದೆ. ಅದು ಮನುಷ್ಯನ ಮುಖವಲ್ಲ. ಅದು ಮನುಷ್ಯನ ಮುಖದ ಆಭಾಸ ಮಾತ್ರ. ಅದೇ ರೀತಿ, ನೀರಿನಲ್ಲಿ ಕಾಣುವ ಚಂದ್ರಸೂರ್ಯಾದಿಗಳ ಪ್ರತಿಬಿಂಬವೂ ಕೂಡ. ಅವು ನಿಜವಾದ ಚಂದ್ರ ಅಥವಾ ಸೂರ್ಯನಲ್ಲ. ಚಂದ್ರ ಅಥವಾ ಸೂರ್ಯನ ಆಭಾಸಗಳು ಮಾತ್ರ.

ಇದರಿಂದ ಗೊತ್ತಾಗುವುದು ಏನು? ಜೀವಾತ್ಮನು ನೈಜ ಆತ್ಮನ ನೆರಳು ಮಾತ್ರ. ಹೀಗಾಗಿ ಜೀವಾತ್ಮನು ನಾಮರೂಪಗಳಿಂದ ಬಗೆಬಗೆಯಾಗುತ್ತಾನೆ. ಅಂದರೆ, ಬೇರೆ ಬೇರೆ ಹೆಸರುಗಳನ್ನು ಮತ್ತು ರೂಪಗಳನ್ನು ಪಡೆದುಕೊಳ್ಳುತ್ತಾನೆ. ತನ್ನ ದೇಹ, ಮನಸ್ಸು, ಬುದ್ಧಿಗಳ ಸಂಪರ್ಕದಿಂದ 'ನಾನು ಸುಖಿ', 'ನಾನು ದುಃಖಿ', 'ನಾನು ಮೂಢ' ಎಂಬ ಭ್ರಮೆಗಳಿಗೆ ಒಳಗಾಗುತ್ತಾನೆ. ಮನುಷ್ಯನ ಮುಖವು ಕನ್ನಡಿಯ ದೋಷದಿಂದ ಬೇರೆಯಾಗಿ ಕಾಣಬಹುದು, ಅಲ್ಲವೇ. ಅದೇ ರೀತಿ ನೀರು ಕೊಳಕಾಗಿದ್ದರೆ ಅದರ ಮೇಲೆ ಪ್ರತಿಬಿಂಬಿತವಾಗುವ ಚಂದ್ರ ಅಥವಾ ಸೂರ್ಯರ ಪ್ರತಿಬಿಂಬವೂ ಕೊಳಕಾಗಿ ತೋರುತ್ತದೆ, ಅಲ್ಲವೇ. ಅದರಂತೆಯೇ ಇದು. ಇದರರ್ಥ, 'ಸುಖಿ', 'ದುಃಖಿ', 'ಮೂಢ' — ಈ ಎಲ್ಲ ಭಾವನೆಗಳೂ ಮನಸ್ಸು ಬುದ್ಧಿ ದೇಹಗಳ ಸಂಪರ್ಕದಿಂದ ಬರುವುದು ಮಾತ್ರ.

ಆದರೆ ಒಂದು ಮುಖ್ಯವಾದ ವಿಷಯವನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಪ್ರತಿಬಿಂಬ ಅಥವಾ ನೆರಳಿನ ರೂಪದಲ್ಲಿ ಇರುವ ಜೀವಾತ್ಮನು ನಿಜವಾಗಿಯೂ ಪರಮಾತ್ಮನೇ ಆಗಿದ್ದಾನೆ. ಏಕೆಂದರೆ ನಾಮರೂಪಗಳ ವೈವಿಧ್ಯದಿಂದ ಉಂಟಾಗಿರುವ ದೇಹ, ಮನಸ್ಸು, ಬುದ್ಧಿಗಳೆಲ್ಲವೂ ನಿಜವಾದುದಲ್ಲ, ಅಸತ್ಯವಾದುದು. ಹೀಗಾಗಿ ಅವುಗಳ ಸಂಪರ್ಕದಿಂದ ಉಂಟಾದ ಜೀವನೆಂಬ ಭಾವನೆಯು ಖಂಡಿತ ನಿಜವಾದುದಲ್ಲ.

ಶ್ವೇತಕೇತುವಿನ ತಂದೆಯು ಹೀಗೆ ಮುಂದುವರೆಯುತ್ತಾನೆ: ''ಸೋಮ್ಯ, ಜೀವಾತ್ಮನಿಗೆ ಇರುವ ಮನಸ್ಸು ಅನ್ನಮಯವಾದುದು, ಪ್ರಾಣವು ಆಪೋಮಯವಾದುದು, ವಾಕ್ಕು ತೇಜೋಮಯವಾದುದು. ಹೀಗೆ ಮೂರು ಭೌತಿಕ ಭೂತಗಳೊಡನೆ ಕೂಡಿಕೊಂಡೇ ಜೀವನು ಇರುತ್ತಾನೆ. ಅವುಗಳ ಜೊತೆಗೆ ತನ್ನನ್ನು ಏಕೀಕರಿಸಿಕೊಂಡಿರುತ್ತಾನೆ. ಹಾಗೆಂದೇ ಅವನನ್ನು ಜೀವಾತ್ಮ ಎಂದು ಕರೆಯುವುದು.''

ಇಷ್ಟು ಉಪದೇಶವನ್ನು ಪಡೆದುಕೊಂಡ ಮೇಲೆ ಶ್ವೇತಕೇತು ನಿವೇದಿಸುತ್ತಾನೆ: ''ಭಗವಂತನೇ, ನನಗೆ ಮತ್ತೂ ಉಪದೇಶವನ್ನು ಮಾಡಬೇಕು.'' ಇದಕ್ಕೆ ಅವನ ತಂದೆಯು ಹೇಳುತ್ತಾನೆ, ''ಮಗೂ, ಹಾಗೆಯೇ ಆಗಲಪ್ಪ'' ಹೀಗೆ ಹೇಳುತ್ತ, ತನ್ನ ಉಪದೇಶವನ್ನು ಮುಂದುವರೆಸುತ್ತಾನೆ.

*(ಮುಂದಿನ ಸಂಚಿಕೆಗೆ)*

ಹುಟ್ಟುಸಾವಿಗೆ ಸಲುವ ಬರಿ ಮರ್ತ್ಯಳೆನಬೇಡ
ತಾಯಿ ಕಾಳಿಯನು;
ಇವಳ ಶ್ರೀನಾಮವನು ಜಪಿಸದಿರೆ ತಾಳುವನೆ
ಪರಶಿವನು ಕೂಡ ಕೊರಳ ಗರಳವನು?
ದೃಷ್ಟಿಮಾತ್ರದಿ ಜಗವ ಸೃಷ್ಟಿ-ಸ್ಥಿತಿ-ಲಯಗಳಲಿ
ತಿರುಗಿಸುವಳು.
ಸಕಲ ಬ್ರಹ್ಮಾಂಡಗಳ ತನ್ನ ಬಸಿರಲಿ ಧರಿಸಿ
ಕಾಪಿಡುವಳು !

*— ರಾಮಪ್ರಸಾದ ಸೇನ್*